ಓ.ಎಸ್. ನಂಃ 40/2018

ಪಿ.ಡಬ್ಲ್ಯೂಃ 1

**ದಿನಾಂಕ 27.06.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎ.ಪಿ. ವಕೀಲರಿಂದಃ**

1. ನಾನು 9 ನೇ ತರಗತಿಯವರಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಿಪಿ.1 ರ 1 ನೇ ಸಾಕ್ಷಿದಾರರಾದ ಬೋರನಾಯಕ ಬಿನ್ ತಮ್ಮನಾಯಕ ರವರು ನನ್ನ ಸಂಬಂಧಿಕನಲ್ಲ ಆದರೆ ನನ್ನ ಪರಿಚಯಸ್ಥರು. ಸುಮಾರು 10–15 ವರ್ಷಗಳಿಂದ ನಾನು ಮತ್ತು ಸದರಿ ಬೋರನಾಯಕರು ಪರಿಚಯಸ್ಥರು ಎಂದರೆ ಸರಿ. ಸಾಮಾನ್ಯವಾಗಿ ನಾನು ಮತ್ತು ಸದರಿ ಬೋರನಾಯಕರು ಒಟ್ಟಿಗೆ ವ್ಯವಹಾರವನ್ನು ಮಾಡುತ್ತೇವೆ ಎಂದರೆ ಸರಿಯಲ್ಲ. ಸದರಿ ಬೋರನಾಯಕರವರಿಗೆ ಹಣದ ಅವಶ್ಯಕತೆ ಇದ್ದಾಗ ನಾನು ಅವರಿಗೆ ಸಾಲವನ್ನು ಕೊಟ್ಟಿದ್ದೆ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಸಾಕ್ಷಿಯು ಮುಂದುವರೆದು ಬೋರನಾಯಕರವರಿಗೆ ನಾನು ವಾರ್ಷಿಕ ಶೇಕಡ 2% ರಂತೆ ಬಡ್ಡಿಗೆ ಸಾಲವನ್ನು ನೀಡಿದ್ದೆ. ನಾನು ಹಣದ ಲೇವಾದೇವಿ ವ್ಯವಹಾರವನ್ನು ಮಾಡಲು ಸರ್ಕಾರದಿಂದ ಪರವಾನಿಗೆಯನ್ನು ಪಡೆದಿರುವುದಿಲ್ಲ.

2. ನಾನು ಬೋರನಾಯಕರವರಿಗೆ ಈ ಹಿಂದೆ ಕೊಟ್ಟ ಸಾಲದ ಪರಿಚಯದಿಂದ ಅವರು ನಿಪಿ.1 ರ ದಾಖಲೆಗೆ ಸಾಕ್ಷಿದಾರನಾಗಿ ತಮ್ಮ ಸಹಿಯನ್ನು ಮಾಡಿರುತ್ತಾನೆ ಎಂದರೆ ಸರಿ. ನಿಪಿ.1 ರ ಪ್ರೋನೋಟ್ ನಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ.1 ರ ದಾಖಲೆಗೆ ಬೋರನಾಯಕ ಮತ್ತು ಕೆ.ವಿ ಕೃಷ್ಣೇಗೌಡರನ್ನು ಹೊರತುಪಡಿಸಿ ನಿಪಿ.1 ರ ದಾಖಲೆಗೆ ಸಾಕ್ಷಿದಾರರಾಗಿ ಬೇರೆ ಯಾರು ಸಹ ಸಹಿಯನ್ನು ಮಾಡಿರುವುದಿಲ್ಲ. ನಿಪಿ.1 ರ ದಾಖಲೆಗೆ ಸಾಕ್ಷಿದಾರರನ್ನು ಹೊರತುಪಡಿಸಿ ಪತ್ರಬರಹಗಾರರು ತಮ್ಮ ಸಹಿಯನ್ನು ಮಾಡಿರುತ್ತಾರೆ. ನಿಪಿ.1 ರ ದಾಖಲೆಗೆ ಸಾಕ್ಷಿದಾರರು ಮತ್ತು ಪತ್ರಬರಹಗಾರರು ಹೊರತುಪಡಿಸಿ ಬೇರೆ ಯಾರು ಸಹ ಸಹಿಯನ್ನು ಮಾಡಿರುವುದಿಲ್ಲ.

3. ನನಗೆ ವೈಯಕ್ತಿಕವಾಗಿ ಪ್ರತಿವಾದಿಯ ಪರಿಚಯವಿಲ್ಲ. ನನಗೆ ನಿಪಿ.1 ರ ಸಾಕ್ಷಿದಾರರಾದ ಬೋರನಾಯಕರವರ ಮೂಲಕ ಪ್ರತಿವಾದಿಯ

ಪರಿಚಯವಾಗಿರುತ್ತದೆ. ನಾನು ಪ್ರತಿವಾದಿಯೊಂದಿಗೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಮತ್ತು ಪ್ರತಿವಾಯ ಮಧ್ಯೆ ಹಣಕಾಸಿನ ವ್ಯವಹಾರವು ಕೆ ಆರ್ ನಗರದಲ್ಲಿ ಆಗಿರುತ್ತದೆ.

4. ನಿಪಿ.1 ರ ಛಾಪಾ ಕಾಗದವನ್ನು ನಾನು ಮತ್ತು ಬೋರನಾಯಕರವರು ಜೊತೆಯಾಗಿ ಹೋಗಿ ತಂದಿರುತ್ತೇವೆ. ಸಾಲದ ವ್ಯವಹಾರದ ಬಗ್ಗೆ ದಾಖಲೆಯನ್ನು ತಾಯಾರಿಸುವ ಉದ್ದೇಶದಿಂದ ನಿಪಿ.1 ರ ಛಾಪಾ ಕಾಗದವನ್ನು ತಂದಿರುತ್ತೇವೆ. ನಿಪಿ.1 ರ ಛಾಪಾ ಕಾಗದದ ಮೌಲ್ಯವನ್ನು ಬೋರನಾಯಕರು ಪಾವತಿಸಿರುತ್ತಾರೆ.

5. ನಿಪಿ.1 ರ ಸಾಕ್ಷಿದಾರರಾದ ಬೋರನಾಯಕರವರು ಪ್ರತಿವಾದಿಯಿಂದ 2 ಖಾಲಿ ಕಾಗದ ಮತ್ತು 1 ಚೆಕ್ಕನ್ನು ಪಡೆದಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತಾವು ಪ್ರತಿವಾದಿಯಿಂದ ಪಡೆದಿದ್ದ ಸದರಿ 2 ಖಾಲಿ ಕಾಗದಗಳ ಪೈಕಿ 1 ಖಾಲಿ ಕಾಗದವನ್ನು ದುರುಪಯೋಗಪಡಿಕೊಂಡು ಸದರಿ ಬೋರನಾಯಕರವರು 2018 ರಲ್ಲಿ ಪ್ರತಿವಾದಿಯ ವಿರುದ್ಧ ಒಂದು ದಾವೆಯನ್ನು ಹೂಡಿದ್ದರು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದ ಮತ್ತು ಬೋರನಾಯಕರವರು 1,50,000/- ರೂಪಾಯಿಗೆ ರಾಜಿ ಮಾಡಿಕೊಂಡು ದಾವೆಯನ್ನು ಮುಕ್ತಾಯಗೊಳಿಸಿದ ನಂತರ ಬೋರನಾಯಕರವರು ಇದೇ ಪ್ರತಿವಾದಿಯ ವಿರುದ್ಧ ಸಿ.ಸಿ 257/2021ರ ಚೆಕ್ ಬೌನ್ಸ್ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಚೆಕ್ ಬೌನ್ಸ್ ಪ್ರಕರಣದಲ್ಲಿ ಪ್ರತಿವಾದಿಗೆ ಬಿಡುಗಡೆಯಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತಾವು ಪ್ರತಿವಾದಿಯಿಂದ ಪಡೆದಿದ್ದ ಸದರಿ 2 ಖಾಲಿ ಕಾಗದಗಳ ಪೈಕಿ ಉಳಿದಿದ್ದ ಇನ್ನೊಂದು ಖಾಲಿ ಕಾಗದವನ್ನು ದುರುಪಯೋಗಪಡಿಕೊಂಡು ಸದರಿ ಬೋರನಾಯಕರವರು ಈ ದಾವೆಯ ನಿಪಿ.1 ರ ದಾಖಲೆಯನ್ನು ಸೃಷ್ಟಿಸಿ ನನ್ನ ಮೂಲಕ ಈ ದಾವೆಯನ್ನು ಹೂಡಿಸಿರುತ್ತಾರೆ ಎಂದರೆ ಸರಿ. ಆದ್ದರಿಂದ ನನ್ನ ಮತ್ತು ಪ್ರತಿವಾದಿಯ ಮಧ್ಯೆ ನೇರವಾಗಿ ಯಾವುದೇ ಹಣಕಾಸಿನ ವ್ಯವಹಾರ ನೆಡದಿರುವುದಿಲ್ಲ ಎಂದರೆ ಸರಿಯಲ್ಲ.

6. ಪ್ರತಿವಾದಿಗೆ 60 ವರ್ಷ ವಯಸ್ಸಾಗಿರಬಹುದು. ಪ್ರತಿವಾದಿ ಮತ್ತು ನಿಪಿ.1 ರ ಸಾಕ್ಷಿದಾರನಾದ ಬೋರನಾಯಕರವರು ಒಂದೇ ಗ್ರಾಮಸ್ಥರು ಎಂದರೆ ಸರಿ.

ಬೋರನಾಯಕರವರು ಪ್ರತಿವಾದಿಯ ವಿರುದ್ಧ ಈ ಹಿಂದೆ ದಾವೆ ಮತ್ತು ಪ್ರಕರಣಗಳನ್ನು ಸಲ್ಲಿಸಿದ ನಂತರದಲ್ಲಿ ಪ್ರತಿವಾದಿ ಮತ್ತು ಬೋರನಾಯಕರ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿ. ಸಾಲದ ಹಣವನ್ನು ಮಾರುಪಾವತಿ ಮಾಡುವಂತೆ ನಾನು ಪ್ರತಿವಾದಿಯೊಂದಿಗೆ ಕೇಳಿರುತ್ತೇನೆ. ನಾನು ನೀಡಿದ ಸಾಲದ ಹಣವನ್ನು ತಾನು ಬೋರನಾಯಕರವರಿಗೆ ಮರುಪಾವತಿ ಮಾಡಿರುದಾಗಿ ಪ್ರತಿವಾದಿಯು ಹೇಳಿರುತ್ತಾರೆ. ನನಗೆ ಕೊಡಬೇಕಾದ ಹಣವನ್ನು ಪ್ರತಿವಾದಿಯು ಬೋರನಾಯಕರವರಿಗೆ ಕೊಟ್ಟ ಕಾರಣ ಬೋರನಾಯಕರವರು ಪ್ರತಿವಾದಿಯ ಸಹಿ ಪಡೆದ ನಿಪಿ.1ರ ಖಾಲಿ ಪ್ರೊನೋಟ್ ನ್ನು ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ.1 ರ ದಾಖಲೆಯನ್ನು ನಾನೇ ಪತ್ರಬರಹಗಾರರೊಂದಿಗೆ ಹೇಳಿ ತಯಾರಿಸಿರುತ್ತೇನೆ.

7. ನಾನು ಸಾಲದ ವ್ಯವಹಾರದ ಹಣ ಮರುಪಾವತಿ ಮಾಡುವಂತೆ ಪ್ರತಿವಾದಿಗೆ ನೋಟಿಸನ್ನು ಕಳುಹಿಸಿರುತ್ತೇನೆ. ನಾನು ಪ್ರತಿವಾದಿಗೆ ನೋಟಿಸು ಕಳುಹಿಸಿದಾಗ ಅವರು ಊರಿನಲ್ಲಿರಲಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗೆ ನೋಟಿಸು ಕಳುಹಿಸುವ 5-6 ವರ್ಷಗಳ ಪೂರ್ವದಲ್ಲಿಯೇ ಪ್ರತಿವಾದಿಯು ತಮ್ಮ ಕುಟುಂಬ ಸಮೇತ ಬೆಂಗಳೂರಿಗೆ ಹೋಗಿದ್ದರು ಎಂದರೆ ಸರಿ. ಪ್ರತಿವಾದಿಯು ಊರಿನಲ್ಲಿದ ಕಾರಣ ನಾನು ಹೇಳಿದ ಹಾಗೆ ನನ್ನ ಮತ್ತು ಪ್ರತಿವಾದಿಯ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆಯದಿದ್ದರು ಸಹ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಬೋರನಾಯಕರವರು ನನ್ನಿಂದ ಈ ಸುಳ್ಳು ದಾವೆಯನ್ನು ಹೂಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**